# ತಾಳಿ.. ತಾಳಿ..!

ಕೊಂಡಿ ಇಲ್ಲದ ಹಾರದ ರೀತಿ ಮೇಲಿನಿಂದ ಹಾಕುವ ಕರಿಮಣಿ ಸರವನ್ನು ಬಹಳ ಮುತುವರ್ಜಿಯಿಂದ ಮಾಡಿಸಿಕೊಂಡಿದ್ದೆ. ತಾಳಿ ಕಟ್ಟುವ ಸಮಯದಲ್ಲಿ ಪುರೋಹಿತರು 'ಮಾಂಗಲ್ಯಧಾರಣೆ..' ಎಂದಾಗ ದೊಡ್ಡ ಬಾಸಿಂಗದ ಮೂಲಕ ಕರಿಮಣಿ ಸರ ಹಾಕಲಾಗುತ್ತಿಲ್ಲ. ಎಲ್ಲರೂ ತಾಳಿ.. ತಾಳಿ.. ಎನ್ನುವವರೇ..!

■ ಶಾರದಾ ವಿ. ಮೂರ್ತಿ



ಸಾಮಾನ್ಯವಾಗಿ ಮದುವೆ ಎಂದರೆ ಎಲ್ಲರ ಜೀವನದಲ್ಲಿ ಸಂಭ್ರಮ, ಸಂತೋಷ. ಆ ಸಂತಸದ ಗಳಿಗೆ ನನ್ನ ಜೀವನದಲ್ಲಿ 17 ರ ಹರೆಯದಲ್ಲೇ, ಅದೂ ಅನಿರೀಕ್ಷಿತವಾಗಿ ಬಂದದ್ದರಿಂದ ಮನೆಯಲ್ಲಿ ಎಲ್ಲಾ ತಯಾರಿಗಳೂ ಅವಸರದಲ್ಲಿ ನಡೆಯುತ್ತಿತ್ತು. ನನ್ನದು ಕುಟುಂಬದಲ್ಲಿಯೇ ಮೊದಲ ಮದುವೆ, ಅದೂ ಮನೆಯಲ್ಲಿಯೇ. ಮನೆಯಲ್ಲೆಲ್ಲಾ ಹರುಷದ ಹೊನಲು. ಅಪ್ಪ,ಅಮ್ಮ, ಅಣ್ಣ, ಪುಟ್ಟ ಪುಟ್ಟ ತಮ್ಮ ತಂಗಿಯರು ಎಲ್ಲರೂ ಖುಷಿಯಲ್ಲಿ ತೇಲಾಡುತ್ತಿದ್ದರು.ಆದರೆ ನನಗೋ ನನ್ನದೇ ಚಿಂತೆ. ನನ್ನ ಮದುವೆಯ ಸೀರೆ, ಕರಿಮಣಿ ಸರ, ಬಾಸಿಂಗ ಇದೆಲ್ಲಾ ನನ್ನದೇ ಆಯ್ಕೆ ಇದ್ದರೆ ಚೆನ್ನ ಎನಿಸುತ್ತಿತ್ತು.

ಅದು 41 ವರುಷದ ಹಿಂದಿನ ಮಾತು. ಭಾವಿ ಪತಿಯಲ್ಲಿ ಹೇಳುವ ಸಲಿಗೆ ಇರಲಿಲ್ಲ. ಪ್ರೀತಿಯ ಅಪ್ಪನಲ್ಲಿ ವಿಷಯ ಅರುಹಿದೆ. ಅವರು ಭಾವೀ ಅಳಿಯನಿಗೆ ಸಂದೇಶ ರವಾನಿಸಿದರು. ತಂದೆಯನ್ನು ಬಾಲ್ಯದಲ್ಲೇ ಕಳೆದು ಕೊಂಡ ಭಾವೀ ಪತಿಗೆ ಸಂಸಾರದ ಹಿರಿತನದ ಜವಾಬ್ದಾರಿ ಇತ್ತು. ಹಾಗಾಗಿ ಮದುವೆಯ ಓಡಾಟ, ನಿರ್ಧಾರಗಳು ಎಲ್ಲಾ ಅವರದ್ದೇ..ಅಪ್ಪನ ಸಂದೇಶಕ್ಕೆ ಉತ್ತರವಾಗಿ ಅವರು 'ಸೀರೆಯ ಬಣ್ಣ ಯಾವುದು ಬೇಕು  ಹೇಳಿ ಅದನ್ನೇ ತರುತ್ತೇವೆ, ಕರಿಮಣಿ ಸರ ನಿಮ್ಮ ಆಯ್ಕೆಯದೇ ತನ್ನಿ, ಆಮೇಲೆ ಲೆಕ್ಕಾಚಾರ ಮಾಡಿಕೊಳ್ಳೋಣ, ಬಾಸಿಂಗ ನನ್ನ ಆಪ್ತ ಸ್ನೇಹಿತನೊಬ್ಬ ಇದ್ದಾನೆ, ತುಂಬಾ ಚೆನ್ನಾಗಿ ವಿಶೇಷವಾಗಿ ಮಾಡಿಕೊಡುತ್ತೇನೆ ಎಂದಿದ್ದಾನೆ' ಎಂದರು.

ಸರಿ, ಸಡಗರದ ಮದುವೆಯ ದಿನ ಬಂದೇ ಬಂತು.ಸಾಲಂಕೃತಳಾಗಿ ಹಸೆಯಲ್ಲಿ ಕುಳಿತಿದ್ದೆ. ಶಾಸ್ತ್ರಗಳು ನಡೆಯುತ್ತಿದ್ದವು. ಆಗ ಆಕಸ್ಮಿಕವಾಗಿ ನನ್ನ ದೃಷ್ಟಿಗೆ ಎದುರುಗಡೆ ಇದ್ದ ದೊಡ್ಡ ತಟ್ಟೆಯಲ್ಲಿ ಫಳಫಳ ಹೊಳೆಯುವ, ಬೆಂಡು ಬೇಗಡೆ, ಮುತ್ತು, ಬಣ್ಣದ ಮಣಿಗಳು, ಹರಳುಗಳಿಂದ ಅಲಂಕೃತಗೊಂಡ ದೊಡ್ಡ ವಸ್ತು ಕಾಣಿಸಿತು.ಅದು ಏನಿರಬಹುದುಎಂದು ಯೋಚಿಸುವಷ್ಟರಲ್ಲಿ ಆ ದೊಡ್ಡ ವಸ್ತು ನಿಧಾನವಾಗಿ, ನನ್ನ ಸೋದರತ್ತೆ ಮತ್ತು ಕೆಲವು ಮುತ್ತೈದೆಯರ ಸಹಾಯದಿಂದ ನನ್ನ ತಲೆಯ ಹತ್ತಿರವೇ ಬಂದಾಗ ಅಂದಾಜಾಯಿತು. ಮಹಾರಾಣಿಯ ಕಿರೀಟದ ಹಾಗಿರುವ ಇದು 'ಬಾಸಿಂಗ' ಎಂದು.

ಪುಟ್ಟ ಬಾಸಿಂಗದ ನಿರೀಕ್ಷೆಯಲ್ಲಿದ್ದ ನನಗೆ ಬೇಸರವಾಯಿತು. ನನ್ನ ಸಣ್ಣ ಮುಖಕ್ಕೆ ದೊಡ್ಡ ಬಾಸಿಂಗ ಹೇಗೆ ಕಾಣುವುದೋ, ಫೋಟೋ ಹೇಗೆ ಬರುವುದೋ ಎಂದು ಚಿಂತಿತಳಾದೆ. ಆದರೆ ಶಾಶ್ವತವಾಗಿ ಇರುವ ಫೋಟೋದಲ್ಲಿ ಬೇಜಾರಿನ ಮುಖ ಬಂದರೆ ಚೆಂದ ಕಾಣುವುದಿಲ್ಲವೆಂದು ನಗೆಯ ಮುಖವಾಡ ಧರಿಸಿದೆ. ಅಲ್ಲಿ ಹೇರ್ ಪಿನ್ ಹಾಕಿ, ಇನ್ನೊಂದು ದಾರ ಸೇರಿಸಿ, ಆ ಕಡೆ ಬಿಗಿಯಾಗಿ ಕಟ್ಟಿ, ಈ ಕಡೆ ಸರೀ ಹಿಡಿದುಕೊಳ್ಳಿ, ಹೀಗೆ ಸಲಹೆ ಸೂಚನೆಗಳು ಬಾಸಿಂಗ ಕೂರಿಸುವಾಗ. ಅಂತೂ ಪೀಠಾರೋಹಣದ ಹಾಗೆ ಬಾಸಿಂಗಾರೋಹಣ ಆಯಿತು. ನನ್ನನ್ನು ನೋಡಿ ಸುತ್ತ ಸೇರಿದ್ದ ನೆಂಟರೆಲ್ಲ ಹಾಸ್ಯಮಿಶ್ರಿತ ನಗೆಯನ್ನು ಚೆಲ್ಲುತ್ತಿದ್ದರು. ಪುರೋಹಿತರು ಇಷ್ಟು ದೊಡ್ಡ ಬಾಸಿಂಗವಾ .....?ಎಂದದ್ದಕ್ಕೆ ನನ್ನ ಸ್ನೇಹಿತ ನನಗಾಗಿ ವಿಶೇಷ ಆಸಕ್ತಿಯಿಂದ ತಯಾರಿಸಿಕೊಟ್ಟ ಅಪರೂಪದ ಅಂದದ ಬಾಸಿಂಗ ಎಂದು ಮದುಮಗ ರಾಯರ ಉತ್ತರ.

ಅಂತೂ ಬಾಸಿಂಗ ತಲೆಯೇರಿದ ನಂತರ ಕರಿಮಣಿ ತಾಳಿ ಕಟ್ಟುವ ಸಂದರ್ಭ ಬಂತಲ್ಲಾ....ನೋಡಿ. ಅದರ ಆಯ್ಕೆ ನನಗೇ ಕೊಟ್ಟಿದ್ದರಲ್ಲ, ನಾನು ಸರದ ಹಿಂಭಾಗಕ್ಕೆ ಹುಕ್ಸ್ ಅಥವಾ ಕೊಂಡಿ ಬೇಡವೆಂದು ಹಾರದ ರೀತಿ ಮೇಲಿಂದ ಹಾಕುವ ಹಾಗೆ ಬೇಕೆಂದು ತುಂಬಾ ಮುತುವರ್ಜಿಯಿಂದ ಮಾಡಿಸಿಕೊಂಡಿದ್ದೆ. ಪುರೋಹಿತರ ಮಂತ್ರದೊಂದಿಗೆ ಮಾಂಗಲ್ಯ ಧಾರಣೆಯ ಸಂಧರ್ಭ ಬಂತು. ಅಲ್ಲೇ ಆಗಿದ್ದು ಫಜೀತಿ... .ದೊಡ್ಡ ಬಾಸಿಂಗದಿಂದ ಕರಿಮಣಿಸರ. ಕೆಳಗೆ ಕುತ್ತಿಗೆಗೆ ಇಳಿಯುತ್ತಿಲ್ಲ. ಎಲ್ಲರೂ ತಾಳಿ ...ತಾಳಿ  ಎನ್ನುವವರೇ.

ಬಾಸಿಂಗ ಬಿಚ್ಚಿಕೊಳ್ಳದಂತೆ ಮೆಲ್ಲಗೆ ಸರಿಸಿ, ಸ್ವಲ್ಪ, ಜರುಗಿಸಿ, ನಿಧಾನ ನಿಧಾನ ಎಂಬ ಉದ್ಗಾರದೊಂದಿಗೆ ಹಲವರ ಸಹಾಯದೊಂದಿಗೆ ಅಂತೂ ಇಂತೂ ತಾಳಿ ಕಟ್ಟುವ ಅಲ್ಲಲ್ಲ....ಕುತ್ತಿಗೆಗೆ ಇಳಿಸುವ ಕಾರ್ಯಕ್ರಮ ನೆರವೇರಿತು.ಎಲ್ಲರಲ್ಲೂ ಸಮಾಧಾನದ ನಿಟ್ಟುಸಿರು. ಈ ಫೋಟೋ ನೋಡಿದಾಗಲೆಲ್ಲಾ ಅಷ್ಟು ದೊಡ್ಡ ಬಾಸಿಂಗ ಮಾಡಿಸಿದ್ದೇಕೆ ಎಂದು ನಾನು, ಆ ರೀತಿ ಕರಿಮಣಿ ಸರ ಮಾಡಿಸಿ ಕೊಂಡಿದ್ದೇಕೆ ಎಂದು ಪತಿ ರಾಯರು. ಅಂತೂ ಪುಟ್ಟ ಕಲಹ ನಡೆದು ಸವಿಯಾದ ಘಳಿಗೆ ಸಿಹಿಯಾದ ನೆನಪಾಗಿ ಮನದಲ್ಲಿ ಉಳಿದಿದೆ. ■

**ನೀವೂ ಬರೆಯಿರಿ**

ಸವಿ ಸವಿ ನೆನಪು.. ಇದೊಂದು ಹೊಸ ಅಂಕಣ.

ಬದುಕಿನಲ್ಲಿ ಸಾವಿರ ಸವಿನೆನಪುಗಳಿವೆ. ಅಂತಹ ನೆನಪುಗಳಲ್ಲಿ ಒಂದನ್ನು ಹೆಕ್ಕಿ ತೆಗೆದು ಅಕ್ಷರ ರೂಪಕ್ಕಿಳಿಸಿ. ಅದನ್ನು ಚಿತ್ರ ಸಮೇತ ನಮಗೆ ಕಳುಹಿಸಿ. ಬರಹ ಸುಮಾರು 400 ಶಬ್ದಗಳಿರಲಿ.  ನಿಮ್ಮ ಹೆಸರು, ವಿಳಾಸ, ಫೋನ್ ನಂಬರ್ ಸ್ಪಷ್ಟವಾಗಿ ಬರೆಯಿರಿ.